Reg No M 1229 42nd Year Sri "Satyavadi" Mysore 8—1—1958

ಸತ್ಯವಾದಿ

ಬಿಡಿ ಪ್ರತಿ 3 ಪೈ | ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ರಾಯರ್ರ.

ಷೇಕ್ ಅಬ್ದುಲ್ಲ ಬಿಡುಗಡೆಗೆ ಕಾಶ್ಮೀರ ಸರ್ಕಾರದ ನಿರ್ಧಾರ

ಪೋ|| ಸ|| ಇನ್ಸ್‌ಪೆಕ್ಟರ್‌ಗೆ ಹೂಡತ

ನರ್ಸ್‌ಗಳ ಮಾನಭಂಗ ಆರೋಪ

ಮಡಿಕೇರಿ 4 — ಇಲ್ಲಿಗೆ 30 ಮೈಲಿಗಳ ದೂರದಲ್ಲಿರುವ ಗೋಣಿಕೊಪ್ಪಲ ನಲ್ಲಿ ಕಳೆದ ಸಂಜೆ ಕೋಪೋದ್ರೇಕಿತ ಗುಂಪೊಂದು ಪೋಲೀಸು ಸಬ್ ಇನ್ಸ್‌ಪೆಕ್ಟರು ವತ್ತು ಹೆಡ್ ಕಾನ್ಸ್ಟೇಬಲನನ್ನು ಹೊಡೆದಿರುವದು ಎರಡು ದಿವಸಗಳ ಕೆಳಗೆ ಪೋ|| ಸ|| ಇನ್ಸ್‌ಪೆಕ್ಟರಾದ ಶ್ರೀ ನಾನಯ್ಯ ಮತ್ತು ಟ್ಯಾಕ್ಸಿ ಮಾಲೀಕ ಚಾಲಕ ಶ್ರೀ ಗೋಪಾಲ್ ಎಂಬವರ್ ಸ್ಥಳೀಯ ಆಸ್ಪತ್ರೆಯ ಇಬ್ಬರು ನರ್ಸ್‌ಗಳ ಮಾನಭಂಗ ಆರೋಪದ ಮೇಲೆ ಈ ಉದ್ರೇಕ ಸ|| ಇನ್ಸ್‌ಪೆಕ್ಟರು ಆಸ್ಪತ್ರೆಗೆ ದಾಖಲಾಗಿದ್ದಾರೆ 7 ಜನರ ಬಂಧನವಾಗಿ ಜಾಮೀನು ಮೇಲೆ ಬಿಡಲಾಗಿದೆ.

ಇಬ್ಬರು ನರ್ಸ್‌ಗಳ ದೂರಿನ ಮೇಲೆ ಸ|| ಇನ್ಸ್‌ಪೆಕ್ಟರು ಮತ್ತು ಟ್ಯಾಕ್ಸಿಯ ಮಾಲೀಕ ಚಾಲಕನ ಮೇಲೆ ಮೊಕದ್ದಮೆ ರಿಜಿಸ್ಟರಾಗಿದೆ

ಶ್ರೀ ಗೋಪಾಲನು ತನ್ನ ಮನೆಯಲ್ಲಿ ಪ್ರಸವ ಸೇನೆಗಾಗಿ ಬೇಕೆಂದು ಈ ನರ್ಸ್‌ಗಳನ್ನು ತನ್ನ ಟ್ಯಾಕ್ಸಿಯಲ್ಲಿ ಕರೆದುಕೊಂಡುಹೋದನೆಂದು ಆರೋಪಿಸಲಾಗಿದೆ ಸ|| ಇನ್ಸ್‌ಪೆಕ್ಟರು ಕಾದಿದ್ದ ಸ್ಥಳಕ್ಕೆ ಅವರನ್ನು ಕರೆದುಕೊಂಡುಹೋದನು ಮತ್ತೆ ಅವರನ್ನು ಅಲ್ಲಿಂದ 10 ಮೈಲಿಗಳ ದೂರದಲ್ಲಿರುವ ವೀರಾಜಪೇಟೆಗೆ ಕರೆದುಕೊಂಡುಹೋಗಬೇಕೆಂದಿದ್ದನು ಆದರೆ ಹುಡುಗಿಯರು ತಿರಸ್ಕರಿಸಿದರು ಮತ್ತು ಓರ್ವಳು ಓಡುತ್ತಿದ್ದ ಟ್ಯಾಕ್ಸಿಯಿಂದ ಧುಮುಕಿ ತೀವ್ರ ಗಾಯಗೊಂಡ ಮೂರನೇ ದಿನ ವೀರಾಜಪೇಟೆ ಆಸ್ಪತ್ರೆಗೆ ದಾಖಲಾದಳು. ದೂರು ಕೊಡಲಾಯಿತು ಎರಡು ದಿನಗಳ ನಂತರ ಈ ನರ್ಸ್ ವಿಶಾಲವಾಗಿ ಹಂಡಿ ಸಂತೆ ದಿನ ಭಾರಿ ಗುಂಪು ಸೇರಿ ಹೊಡೆದರು

ಸುಕರ್ನೋರೊಂದಿಗೆ ಮಾತುಕತೆ

ನವದೆಹಲಿ 7— ಇಂಡೋನೇಷಿಯ ಅಧ್ಯಕ್ಷ ಸೋಕರ್ನೊ ಮತ್ತು ಪ್ರಧಾನಿ ನೆಹ್ರೂ ರಾಷ್ಟ್ರಪತಿ ಭವನದಲ್ಲಿ ಅಂತರ ರಾಷ್ಟ್ರೀಯ ಪರಿಸ್ಥಿತಿ ಬಗ್ಗೆ ಪೀಠಿಕಾರೂಪವಾದ ಮಾತುಕತೆ ನಡೆಸಿದರು — ನಂತರ ಈರ್ವರೂ ಅಧ್ಯಕ್ಷ ಡಾ|| ಪ್ರಸಾದರೊಡನೆ ಟೀ ಸೇವಿಸಿದರು — ಪಶ್ಚಿಮ ಇರಿಯ (ನ್ಯೂ ಗಿನಿಯಲ್ಲಿ ಡಚ್ಚರ ಧೀನದಲ್ಲಿರುವ ರಾಜ್ಯ) ವೇಲೆ ಇಂಡೋನೇಷಿಯಾದ ಹಕ್ಕಿಗೆ ಪಂ|| ನೆಹರೂರವರ ಬೆಂಬಲವನ್ನು ಸೋಕರ್ನೊ ಒಯ್ಯಲಿರುವರೆಂದು ಹೇಳಲಾಗಿದೆ.

ಗ್ರಹಾಂ ಆಗಮನ

ಕರಾಚಿ 7— ವಿಶ್ವಸಂಸ್ಥೆ ಪ್ರತಿನಿಧಿ ಗ್ರಹಾಂ ಮೊದಲು ಭಾರತಕ್ಕೆ ಬಂದು ಅಲ್ಲಿ 5 ದಿವಸವಿದ್ದು ಮಾತುಕತೆ ಮುಗಿಸಿಕೊಂಡು ತಾ || 17 ರಂದು ಇಲ್ಲಿಗೆ ಬರುವರೆಂದು ಸರ್ಕಾರಿ ನಿರೀಕ್ಷಣೆಯಾಗಿದೆ

ಕ್ಷಿಪಣಿಗಳ ಅಭಿವೃದ್ಧಿಗೆ ಬೇಡಿಕೆ

ವಾಷಿಂಗ್ಟನ್ 7— ಮಿಸಿಲಿಗಳನ್ನು ಅಭಿವೃದ್ಧಿಪಡಿಸಲು ಮತ್ತು ರಾಷ್ಟ್ರದ ಏಮಾನ ರಕ್ಷಣಾ ಕಾರ್ಯವನ್ನು ಒಲಪಡಿಸಲು ಅಧ್ಯಕ್ಷ ಐಸೆಹೋವರರು ಕಾಂಗ್ರೆಸ್ಸನ್ನು 1260 ಮಿಲಿಯ ಡಾಲರುಗಳನ್ನು ಕೇಳಿದ್ದಾರೆ.

ಕೃಷ್ಣ ನಿಧಿಗೆ ಕಾಣಿಕೆ

ತಿರುವೆಂಡ್ರಂ 6— ಕೃಷ್ಣ ನಿಧಿಗೆ ಕೇರಳ ಸರಕಾರವು ರೂ 500 ಕೊಟ್ಟಿದೆ: ಕಲಾವಿದ ಕೃಷ್ಣ ಒಂದು ಚಿತ್ರ ಬರೆಯುತ್ತಿದ್ದಾಗ, ಪಕ್ಕದಮನೆಗೆ ಬೆಂಕಿಬಿದ್ದಿದನ್ನು ತೀದು ಅಲ್ಲಿಗೆ ಹೋಗಿ ಸಟ್ಟು ಹೋಗುತ್ತಿದ್ದ ಇಬ್ಬರುಮಕ್ಕಳನ್ನು ಒಳಗಿನಿಂದ ಕಂಡು ಒದುಕಿಸಿದನು: ಆದರೆ ಈ ಕಾರ್ಯದಲ್ಲಿ ತಾನು ವ್ಯತಪಟ್ಟನು.

ರೂ. 50 ವಿಶ್ರಾಂತಿ ವೇತನ

ಕಾಶಿಯ ಪತ್ರಿಕೋದ್ಯೋಗಿಯಾದ ಶ್ರೀ ಪಿ. ಸೂರ್ಯನಾರಾಯಣಯ್ಯರಿಗೆ ಅವರು 1942 ನೇ ಆಗಸ್ಟ್ ಚಳವಳಿಯಲ್ಲಿ ವಹಿಸಿದ್ದ ಪಾತ್ರಕ್ಕಾಗಿ 50 ರೂ ಪಾಯಿಗಳ ಪೆನ್ಷನ್ನನ್ನು ಉತ್ತರ ಪ್ರದೇಶದ ಗವರ್ನರು ಸ್ಯಾಂಕ್ಷನ್ ಮಾಡಿದ್ದಾರೆ

ಗಲಭೆಯಿಂದ ನಷ್ಟ

ಮದರಾಸು 7— ಪಂ|| ನೆಹರು ವಿರುದ್ಧ ದ್ರವಿಡ ಮುನ್ನೇತ್ರ ಸಂಘದ ಪ್ರದರ್ಶನ ಸಂಬಂಧದಲ್ಲಿ ನಿನ್ನೇ ಸಂಜೆ 150 ದಸ್ತಗಿರಿ ಮಾಡಲ್ಪಟ್ಟರು — ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದ ಒಬ್ಬನು ಸತ್ತುಹೋದನು — ನಿನ್ನೇ ಘಟನೆಯಲ್ಲಿ ಸರ್ಕಾರಿ ಬಸ್ಸುಗಳಿಗೆ ರೂ. 49800 ನಷ್ಟವಾಗಿರುವುದೆಂದು ಸರ್ಕಾರಿ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು ಅಂದಾಜು ಮಾಡಿರುವರು.

ಒಂದು ವಾರ ಸಜ

ಮಧುರೈ 7— ನಿನ್ನೆ 144 ನೇ ವಿಧಿಯನ್ನು ಉಲ್ಲಂಘಿಸಿದ 94 ಮಂದಿ ಡಿಎಂಕೆ ಸ್ವಯಂಸೇವಕರಿಗೆ ತಲಾ ಒಂದು ವಾರ ಸಾದಾ ಸಜಾ ವಿಧಿಸಲಾಗಿದೆ — ಸಂಚಾರಕ್ಕೆ ಅಡ್ಡಿಪಡಿಸಿದ ಆಪಾದನೆಗೆ ಗುರಿಮಾಡಲ್ಪಟ್ಟಿದ್ದ 104 ಮಂದಿಗೆ ತಲಾ ರೂ. 2 ಜುಲ್ಮಾನೆ ತಪ್ಪಿದರೆ 2 ದಿನ ಸಾದಾ ಸಜಾ ವಿಧಿಸಲಾಯಿತು

ವಿಜ್ಞಾನಿಗಳಿಗೆ ನಷ್ಟ

ಲಂಡನ್ 7— ಭಾರತದಲ್ಲಿ ಇಂಗ್ಲೀಷಿಗೆ ಬದಲು ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಮಾಡಿದರೆ, ಭಾರತೀಯ ವಿಜ್ಞಾನಿಗಳಿಗೆ ತುಂಬಾ ನಷ್ಟವುಂಟಾಗುವುದು ಎಂದು ಮಾಂಚಿಸ್ಟರು ಗಾರ್ಡಿಯನ್ ಮತ್ತು ಸ್ಕಾಟ್ಸ್‌ಮನ್ ಪತ್ರಿಕೆಗಳು ಪ್ರಕಟಿಸಿವೆ.

ಶ್ರೀನಗರ 7— ಜಮ್ಮು ಕಾಶ್ಮೀರ ಸರಕಾರವು ಷೇಕ್ ಅಬ್ದುಲ್ಲ ಮತ್ತು ಆತನ ಈಬ್ಬರು ಜೊತೆಗಾರರನ್ನು ಬಿಡುಗಡೆ ಮಾಡಲು ನಿರ್ಧರಿಸಿರುವರೆಂದು ಪ್ರಧಾನಿ ಭಕ್ಷಿ ಗುಲಾಂ ಮಹಮದ್ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಸುದ್ದಿಗಳು

ತಿರುವೆಂಡ್ರಂ 7— ವ್ಯವಸಾಯ ಮಾಡದೇ ಇರುವ ಭೂಮಿ ಹೊಂದಿರುವವರು, ತಾವೇ ಆಗಲಿ ಗುತ್ತಿಗೇಗಾರರಿಂದಾಗಲೀ ವ್ಯವಸಾಯ ಮಾಡಿಸಲು ಒತ್ತಾಯ ಪಡಿಸುವಂತೆ ಕಲೆಕ್ಟರುಗಳಿಗೆ ಆಜ್ಞೆ ಮಾಡಲಾಗಿದೆ — ಕೇರಳದಲ್ಲಿ ವ್ಯವಸಾಯವಿಲ್ಲದ ಭೂಮಿ ಇರದಂತೆ ಮಾಡಲಾಗುವುದೆಂದು ಹೇಳಲಾಗಿದೆ.

ಂ ಂ

ಲಂಡನ್ 7— ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮೆಕ್ಮಿಲನ್ನರು ಕಾಮನ್ವೆಲ್ತಿನಲ್ಲಿ ಪ್ರವಾಸ ನಡೆಸಲು ಇಂದು ಲಂಡನ್ನಿನಿಂದ ಹೊರಟರು.

ಂ ಂ

ಬೆಂಗಳೂರು 7 — ಡಿಸೆಂಬರು 3 ನೆ ವಾರದಲ್ಲಿ ಬೆಂಗಳೂರುಕಾರ್ಪೊರೇಷನ್ ಆರೋಗ್ಯ ವಂದಿಯಲ್ಲಿ ಜನನಮರಣಗಳಿಂಡೂ ಹೆಚ್ಚಾಗಿವದಾಗಿ ತಿಳಿಸಲಾಗಿದೆ ಆ ವಾರದಲ್ಲಿ 273 ಸಾವು 564 ಜನನ ಆಗಿವೆ ಮುದಿ ವಯಸ್ಸಿನಲ್ಲಿ ಆದ ಮರಣದ ನಂತರ ಎಂಡನೆಯ ಅಧಿಕ ಮರಣವೆಂದರೆ ಅತಿಸಾರದಿಂದ.

ಂ ಂ

ಬೆಂಗಳೂರು 7— ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಟೌನ್‌ಹಾಲಿನಲ್ಲಿ ಅಣಕು ವಿಶ್ವಸಂಸ್ಥೆ ಅಸೆಂಬ್ಲಿ ನಡೆಸಲಾಗುವುದು,

ನಾಳೆಯ ಹಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಪತ್ಕುಮಾರ್ ಜೋಯಿಸರಿಂದ

9 ಚೌತಿ ಮಂಗಳ

ಬೆಕ್ಕಿಗೆ ಹೆದರುತ್ತಿದ್ದ ಧೀರ ನೆಪೋಲಿಯನ್ !

ಸಪ್ರಖ್ಯಾತ ನೆಪೋಲಿಯನ್ ಬೋನೋಪಾರ್ಟನು ಎತ್ತರದಲ್ಲಿ ಸ್ವಲ್ಪ ಕಡವೆ ಆಗಿದ್ದನು ; ಕುಳ್ಳಗಿರುವ ಅನೇಕರಂತೆ ತನ್ನ ಕಡಮೆ ಎತ್ತರದ ಬಗ್ಗೆ ಅಸಮಾಧಾನ ಪಡುತ್ತಿರಲಿಲ್ಲ ; ಸಗಟು ಎತ್ತರವಾಗಿದ್ದ ಒನಪೊಡನೆ ಸಂಬಂಧವನ್ನು ತ್ಯಜಿಸುತ್ತಿರಲಿಲ್ಲ ; ಸಾಧಾರಣವಾದ ಉಡುಪು ಧರಿಸುತ್ತಿದ್ದನು : ಮತ್ತು ಯಾವಾಗಲೂ ತನಗಿಂತ ಎತ್ತರವಾದ ಸೇನಾಧಿಕಾರಿಗಳಿಂದ ಸುತ್ತುವರಿಯುತ್ತಿದ್ದನು : ಅವರು ಇವನೊಡನೆ ಮಾತನಾಡುವಾಗ ತಮ್ಮ ತಲೆಗಳನ್ನು ತಗ್ಗಿಸಿ ಮಾತಾಡಬೇಕಾಗಿದ್ದಿತು ; ಎಂದರೆ ಈ ಚಿಕ್ಕ ಮನುಷ್ಯನ ಎದುರಿಗೆ ನಮ್ರತೆ ಮತ್ತು ಗೌರವದಿಂದ ಕೂಡಿದ ನಡತೆಯುಳ್ಳವರಂತೆ ಕಾಣುತ್ತಿದ್ದರು : ಯುದ್ಧ ಭೂಮಿಯಲ್ಲಿ ಫಿರಂಗಿಗಳ ಮಧ್ಯೆ ನಿರ್ಭೀತನಾಗಿ ಹೋಗುತ್ತಿದ್ದ ಈ ಧೀರ ಯೋಧನು, ತನ್ನ ಖಾಸಗೀ ಜೀವಿತದಲ್ಲಿ ಬೆಕ್ಕಿಗೆ ಹೆದರುತ್ತಿದ್ದನು !

ರಷ್ಯ ಭಾಷೆಯಲ್ಲಿ ಹಿಂದೀ ವ್ಯಾಕರಣ

ಮಾಸ್ಕೋ— ಭಾರತೀಯ ವ್ಯಾಕರಣ ಶಾಸ್ತ್ರ ಪಂಡಿತ ಶ್ರೀ ಕಾಮತ ಪ್ರಸಾದ ಗುರುವರು ಬರೆದ ಹಿಂದೀ ವ್ಯಾಕರಣದ ರಶಿಯನ್ ಭಾಷಾಂತರವನ್ನು ಇಲ್ಲಿ ಪ್ರಕಟಿಸಲಾಗಿದೆ 1952 ರಲ್ಲಿ ಪ್ರಕಟವಾದ ಅತ್ಯಂತ ಇತ್ತೀಚಿನ ಸಂಸ್ಕರಣದಿಂದಲೇ — ಸ್ವತಃ ಲೇಖಕರೇ ಮಾಡಿದ್ದ ಸಂಶೋಧನೆಗಳೆನ್ನೂ ಒಳಗೊಂಡು — ಈ ಅನುವಾದವನ್ನು ತಯಾರಿಸಲಾಗಿದೆ ಸೋವಿಯತ್ ಪಂಡಿತರು ಈ ವೈಜ್ಞಾನಿಕ ಕೃತಿಯ ಬಗ್ಗೆ ತುಂಬಾ ಆಸಕ್ತಿಯುಳ್ಳವರಾಗಿದ್ದಾರೆ

ಉಚ್ಚೇಕಸ್ಥಾನದಲ್ಲಿ 7000 ಗಳಷ್ಟು ಪುರಾತನ ಗುಹಾಚಿತ್ರಗಳು !

ತಿರ್ಮೆಜ್— ಉಜ್ಬೇಕಿಸ್ತಾನದ ಗಿಸ್ಸಾರ್ ಪರ್ವತ ಶ್ರೇಣಿಯ ಪದತಲದಲ್ಲಿನ ಗುಹೆಗಳಲ್ಲಿ ಪುರಾವಸ್ತು ಸಂಶೋಧಕರು ಶಿಲಾ ಲೇಖನಗಳನ್ನು ಕಂಡು ಹಿಡಿದಿದ್ದಾರೆ ; ಅಲ್ಲಿ ಸುಮಾರು 200 ಬೇಟೆಯ ಚಿತ್ರಗಳಿವೆ : ಅವು 5000 ದಿಂದ 7000 ವರ್ಷಗಳಷ್ಟು ಪುರಾತನವಾಗಿವೆಯೆಂದು ಪ್ರಾಕ್ತನವಿಮರ್ಶಾತಜ್ಞರು ಅಭಿಪ್ರಾಯಪಡುತ್ತಾರೆ.

ನವದೆಹಲಿ 7— ಭಾರತದ ಸೇನಾಶಾಖೆಯ ಮುಖ್ಯಾಧಿಕಾರಿಗಳಾದ ಜನರಲ್ ಕೆ ಎಸ್. ತಿಮ್ಮಯ್ಯನವರು 1958 ರ ಜನವರಿ 15 ರಂದು ಪ್ರಾತಃಕಾಲ 9 ವರೆ ಗಂಟೆಗೆ ದೆಹಲಿ ಕಂಟೋನ್ಮೆಂಟಿನ ಗ್ಯಾರಿಸನ್ ಪೆರೇಡು ಮೈದಾನದಲ್ಲಿ ನಡೆಯುವ ಸೇನಾ ವಾರ್ಷಿಕ ಪೆರೇಡಿನಲ್ಲಿ ವಂದನೆಯನ್ನು ಸ್ವೀಕರಿಸುವರು.

ಂ ಂ ಂ ಂ

ಸಿಂಧ್ರಿ ಕೃಷಿಕ ಗೊಬ್ಬರ ಕಾರ್ಖಾನೆಯು 1957 ರಲ್ಲಿ ಇಟ್ಟುಕೊಳ್ಳಲಾಗಿದ್ದ ಉತ್ಪಾದನಾ ಗುರಿಯನ್ನು ದಾಟಿ 1833 ಟನ್ನುಗಳಷ್ಟು ಕೃತಕ ಗೊಬ್ಬರವನ್ನು ಹೆಚ್ಚಾಗಿ ಉತ್ಪಾದಿಸಿದೆ.

ಂ ಂ ಂ ಂ

ಜಿಕೋಸ್ಲವಾಕಿಯಾದ ಪ್ರಧಾನ ಮಂತ್ರಿ ವಿ || ವಿಲಿಯಂ ಸಿರೋಕಿಯವರು 1958 ರ ಜನವರಿ 9 ಮತ್ತು 10 ರಂದು ಬೆಂಗಳೂರಿಗೆ ಭೇಟಿಕೊಡುವರು

Protect the cowಗೋ ಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೊಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುಸೈದ, ಶಾಕಾಹಾರ ಮುಂತಾದ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ 8 ಆಣೆ ಅಂಚೆವೆಚ್ಚ

ಬೆಂಬಲಿಗರು ರೂ 10 (ಒಂದೇಸಾರಿ) ಇವರಿಗೆ ಪತ್ರಿಕೆ ಸದಾ ಕೊಡಲಾಗುವುದು

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

ವುಡ್‌ಲ್ಯಾಂಡ್ಸ್

ಪ್ರಶಂಸನೀಯ 11 ನೇವಾರ

ಮದರ್ ಇಂಡಿಯ

ವರ್ಣರಂಜಿತ ಹಿಂದಿ ಚಿತ್ರರತ್ನ

ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್

6-1-58 ರಿಂದ

ಚಂದ್ರಬಾಬು, — ಇ ವಿ ಸರೋಜ ಪಾರ್ಟಿ ಮಾಡಿರುವ

ಅಮರಾವತಿ

(ತಮಿಳು)

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಬೆಳಗಿನ ಪ್ರದರ್ಶನ 10-30 ಕ್ಕೆ

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

ಅಪೆರಾ— ಜಯಪ್ರದ 3 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಜೇಲಂಗಿ ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual		Rs 1-50 per inch
Contract above	100 inches	1-00
	500	0-75

Column width 2 inches; length 12½ inches; 4 columns to a page

The decision of the management is final in all matters

Manager "Satyavadi", Chamarajpuram, Mysore

Edited, Printed & Published by Dharma Prachara Nirata M S Krishna Rao, at the Satyavadi Press Chamarajpuram, Mysore